† ಶ್ರೀ ಎಂ. ವೈ. ಘೋರ್ಪಡೆ.—70 ಕೋಟಿ ರೂಪಾಯಿ ಆಗುವುದಿಲ್ಲ. ಬೆಂಗಳೂರು ಜಿಲ್ಲೆಯಿಂದ ಪೋಟಾರು ವಾಹನಗಳ ತೆರಿಗೆಯಿಂದ ಬರುವ 6 ಕೋಟಿ 17 ಲಕ್ಷ ರೂಪಾಯಿಗಳನ್ನು ಸೇರಿಸಿದರೆ ಒಟ್ಟು 40 ಕೋಟಿ ರೂಪಾಯಿಗಳಾಗಬಹುದು. ಇದರಲ್ಲಿ ಸೇಲ್ಸ್‌ಟ್ಯಾಕ್ಸ್‌ನಿಂದ 25 ಕೋಟಿ, ಸ್ಟಾಂಪ್ ಡ್ಯೂಟಿಯಿಂದ ಒಂದು ಕೋಟಿ 90 ಲಕ್ಷ, ಎಕ್ಸೈಜ್‌ನಿಂದ 2.29 ಕೋಟಿ, ಎಲೆಕ್ಟ್ರಿಸಿಟಿಯಿಂದ 1.40ಕೋಟಿ ರೂಪಾಯಿ ಈ ರೀತಿ ಬೇರೆ ಬೇರೆ ಬಾಬುಗಳಿಂದ ಬರುವುದನ್ನು ಸೇರಿಸಿದರೆ 3364 ಲಕ್ಷ ರೂಪಾಯಿಗಳಾಗುತ್ತದೆ ಇದಕ್ಕೆ ಬೆಂಗಳೂರು ಜಿಲ್ಲೆಯಿಂದ ಬರುವ ಪೋಟಾರ್ ವಾಹನಗಳ ತೆರಿಗೆಯನ್ನು ಸೇರಿಸಿದರೆ 40 ಕೋಟಿ ರೂಪಾಯಿ ಆಗಬಹುದು

ಶ್ರೀ ಕೆ. ಶ್ರೀರಾಮುಲು.—ಈ ತೆರಿಗೆಗಳಿಗೂ ಬೆಂಗಳೂರು ನಗರದ ಅಭಿವೃದ್ಧಿ ಕೆಲಸಗಳಿಗೂ ಸಂಬಂಧವಿಲ್ಲವೆಂದು ಹೇಳಿದ್ದೀರಿ. ಹಾಗಾದರೆ ಬೆಂಗಳೂರಿನಲ್ಲಿ ಶಾಲೆಗಳಿಗಾಗಲೀ, ರಸ್ತೆಗಳಿಗಾಗಿ ಯಾಗಲೀ, ಆಸ್ಪತ್ರೆಗಳಿಗಾಗಲೀ, ಕೊಳಚೆ ಪ್ರದೇಶಗಳ ನಿರ್ಮೂಲೀಕರಣಕ್ಕಾಗಲೀ ತೆರಿಗೆಯಿಂದ ಬರುವ ಹಣವಲ್ಲದೆ ಬೇರೆ ಹಣವನ್ನು ಖರ್ಚು ಮಾಡಲಾಗುತ್ತಿದೆಯೇ ?

ಶ್ರೀ ಎಂ. ವೈ. ಘೋರ್ಪಡೆ.—ತಾವು ಕೊಳಚೆ ಪ್ರದೇಶಗಳ ನಿರ್ಮೂಲೀಕರಣದ ಬಗ್ಗೆ ಕೇಳಿದ್ದೀರಿ. ಆ ಬಗ್ಗೆ ಏನೇನು ಸ್ಕೀಮ್‌ಗಳಿವೆ ಎಂಬುದು ತಮಗೂ ಗೊತ್ತಿದೆ. ಇದಕ್ಕಾಗಿ ಹೆಚ್ಚು ಹಣವನ್ನು ಖರ್ಚು ಮಾಡಬೇಕೆಂಬುದನ್ನು ನಾನು ಒಪ್ಪುತ್ತೇನೆ. ಆದರೆ ಈ ತೆರಿಗೆಯಿಂದ ಬರುವ ಹಣಕ್ಕೂ ಸ್ಲಮ್ ಕ್ಲಿಯರೆನ್ಸ್‌ಗೆ ಮತ್ತು ಬೇರೆಬೇರೆ ಡೆವಲಪ್‌ಮೆಂಟ್ ಕೆಲಸಗಳಿಗೆ ಖರ್ಚು ಮಾಡುವ ಹಣಕ್ಕೂ ಸಂಬಂಧವಿಲ್ಲ. ಬೆಂಗಳೂರು ನಗರ ಈ ಮಟ್ಟಕ್ಕೆ ಬರಬೇಕಾದರೆ ಇದುವರೆಗೆ ಸರ್ಕಾರದವರು ಬಹಳಷ್ಟು ಹಣವನ್ನು ಬೆಂಗಳೂರು ನಗರದ ಅಭಿವೃದ್ಧಿಗಾಗಿ ಖರ್ಚು ಮಾಡಿರುವುದೇ ಕಾರಣ: ಇದರಿಂದ ಈಗ ಟ್ಯಾಕ್ಸ್ ಕೊಡುವ ಶಕ್ತಿ ಬೆಂಗಳೂರು ನಗರಕ್ಕೆ ಹೆಚ್ಚು ಇದ್ದರೆ ಅದನ್ನು ಬೇರೆ ಪ್ರದೇಶಗಳನ್ನು ಡೆವಲಪ್ ಮಾಡುವ ಸಲುವಾಗಿ ಖರ್ಚು ಮಾಡಿದರೆ ಅದರಲ್ಲಿ ತಪ್ಪೆನೂ ಇಲ್ಲ, ಈ ಟ್ಯಾಕ್ಸ್‌ನಿಂದ ಬರುವ ಹಣವನ್ನು ರಾಜ್ಯದ ಎಲ್ಲ ಭಾಗಗಳೂ ಮುಂದೆ ಬರುವ ರೀತಿಯಲ್ಲಿ ಉಪಯೋಗ ಮಾಡಬೇಕಾಗುತ್ತದೆ. ಇಲ್ಲದಿದ್ದರೆ ಒಬ್ಬ ಶ್ರೀಮಂತ ಕೊಟ್ಟ ಟ್ಯಾಕ್ಸ್ ಹಣವನ್ನು ಅವನ ಕಾಂಪೌಂಡ್‌ನಲ್ಲಿಯೇ ಖರ್ಚು ಮಾಡಬೇಕೆಂದರೆ, ಅದರಿಂದ ಸಮಾಜವಾದವನ್ನು ಜಾರಿಗೆ ತರುವುದು ಕಷ್ಟವಾಗುತ್ತದೆ. ಮತ್ತು ಅದು ಸಮಾಜವಾದದ ತತ್ವಕ್ಕೆ ವಿರುದ್ಧವಾಗುತ್ತದೆ. ಸ್ಲಮ್ ಕ್ಲಿಯರೆನ್ಸ್‌ಗಾಗಿ ಇನ್ನೂ ಹೆಚ್ಚು ಹಣ ಖರ್ಚಾಗಬೇಕೆಂದು ತಾವು ಹೇಳುವುದಾದರೆ ಅದನ್ನು ನಾನು ಒಪ್ಪುತ್ತೇನೆ. ಆದರೆ ಬೆಂಗಳೂರಿನಿಂದ ಬರುವ ತೆರಿಗೆಯೆಲ್ಲವನ್ನೂ ಬೆಂಗಳೂರಿನಲ್ಲಿಯೇ ಖರ್ಚು ಮಾಡಬೇಕೆಂಬ ವಾದವನ್ನು ಒಪ್ಪುವುದಕ್ಕಾಗುವುದಿಲ್ಲ. ಆ ರೀತಿ ಯಾವ ಸರ್ಕಾರವೂ ಮಾಡುವುದಕ್ಕಾಗುವುದಿಲ್ಲ.

ಶ್ರೀ ಕೆ. ಶ್ರೀರಾಮುಲು.—ಆ ಉದ್ದೇಶದಿಂದ ನಾನು ಈ ಪ್ರಶ್ನೆಯನ್ನು ಕೇಳಲಿಲ್ಲ. ಇತರ ಕಡೆಯ ಟ್ಯಾಕ್ಸನ್ನು 25 ವರ್ಷಗಳಿಂದ ಬೆಂಗಳೂರಿನವರಿಗೆ ಸರ್ಕಾರದವರು ಏನಾದರೂ ಖರ್ಚು ಮಾಡಿದ್ದಾರೆಯೇ ? ಒಂದು ವೇಳೆ ಆ ರೀತಿ ಸರ್ಕಾರದವರು ಖರ್ಚು ಮಾಡಿದ್ದರೆ ಯಾವ ಅಭಿವೃದ್ಧಿಗೋಸ್ಕರ ಎಷ್ಟು ಹಣವನ್ನು ಖರ್ಚು ಮಾಡಿದ್ದಾರೆ ಎನ್ನುವ ವಿವರಣೆಯನ್ನು ಕೊಡುತ್ತೀರಾ ?

ಶ್ರೀ ಎಂ. ವೈ. ಘೋರ್ಪಡೆ.—ಇಂಥಾ ಪ್ರಶ್ನೆಗೆ ಉತ್ತರ ಹೇಳುವುದಕ್ಕಾಗುವುದಿಲ್ಲ. ಬೆಂಗಳೂರಿನಲ್ಲಿ ಕಟ್ಟಡ, ನೀರು ಸರಬರಾಜು, ಕಾರ್ಖಾನೆಗಳು ಇತ್ಯಾದಿಗಳನ್ನು ನೋಡಿ ಹಾಕಿದರೆ ಹೆಚ್ಚು ಪ್ರಮಾಣದಲ್ಲಿ ಖರ್ಚಾಗಿದೆ ಎನ್ನುವುದು ಎಲ್ಲರಿಗೂ ಕಣ್ಣಿಗೆ ಕಾಣಿಸುತ್ತದೆ. ಅದನ್ನು ಪಟ್ಟಿ ಮಾಡಿ ನಾನು ತಂದಿಲ್ಲ.

Desilting the Gondi Channel

194. ABDUL KUDDUS ANWAR (Bhadravathi).—

Will the Minister of State for Major Irrigation be pleased to state :—

(*a*) the area that is irrigated by Gondi Right and Left Bank Channel of Bhadravathi Taluk ;

(*b*) the amount spent for desilting these channels, during the last 6 years (yearwise figure may be furnished) ;

(*c*) the amount sanctioned for desilting in Bhadravathi and Gondi Channel for the Years 1971-72, 1972-73 ?

Sri H. N. NANJE GOWDA (Minister of State for Major Irrigation).—

(*a*) 1.	Right bank Channel	...	10,520 acres
2.	Left bank channel	...	520 acres
	Total	...	11,040

(*b*)	*Years*		*Amount spent*
1.	1966-67	...	Rs. 6,758
2.	1967-68	...	Rs. 4,056
3.	1968-69	...	Rs. 5,451
4.	1969-70	...	Rs. 4,976
5.	1970-71		Rs. 22,535
6.	1971-72	...	Rs. 9,850
		Total	53,626

(*c*)	*Years*		*Amount sanctioned*
1.	1971-72	...	Rs. 11,458
2.	1972-73	...	Rs. 6,908
		Total :	Rs. 18,366

Sri ABDUL KUDDUS ANWAR.—Supplementary to (a) ; Does this include unauthorised achkat also ?

†Sri H. N. NANJE GOWDA.—No.

Sri ABDUL KUDDUS ANWAR.—In the year 1970-71 the amount spent is Rs. 22,535 whereas in the year 1971-72 the amount spent is meagre. Since the estimates for desilting and deepening the right and left bank channels are ready, will the Government take up the work ?

Sri H. N. NANJE GOWDA.—Government is thinking of taking up this work in two stages. For the first stage we have received estimates costing Rs. 4.23 lakhs and it is being examined by the Chief Engineer. We hope to repair upto the tenth mile. The second stage we will take up afterwards. This is being examined. After proper scrutiny Government is thinking of sanctioning the same and taking up the work.

ಶ್ರೀ ಆರ್. ಎಸ್. ಪಾಟೀಲ್.—11,040 ಎಕರೆಗೆ ನೀರನ್ನು ಒದಗಿಸತಕ್ಕಂಥಾ ಈ ಚಾನಲ್ ಉದ್ದ ಎಷ್ಟು ? ಇದಕ್ಕೆ ಎಷ್ಟು ಹಣವನ್ನು ಒದಗಿಸಿದ್ದೀರಿ, ಈ ಚಾನಲ್‌ನಲ್ಲಿ ಎಷ್ಟು ದೂರ ಹೂಳು ಎತ್ತಬೇಕು ಎಂದು ಇದ್ದೀರಿ ?

ಶ್ರೀ ಎಚ್. ಎನ್. ನಂಜೇಗೌಡ.—ಈ ನಾಲೆಯ ಹೂಳನ್ನು ತೆಗೆಯಲು ಎಸ್ಟಿಮೇಟ್ ತಯಾರಾಗಿದೆ. 20 ಮೈಲಿ ಉದ್ದ ಇರುವ ಈ ನಾಲೆಯ ಕೆಲಸವನ್ನು ಎರಡು ಸ್ಟೇಜಿನಲ್ಲಿ ತೆಗೆದುಕೊಳ್ಳಬೇಕೆಂದಿದ್ದೇವೆ. ಈಗ ಮೊದಲನೇ ಹಂತದಲ್ಲಿ 10 ಮೈಲಿ ತೆಗೆದುಕೊಂಡು ಈ ಕೆಲಸವನ್ನು ಮಾಡಲು 4 ಲಕ್ಷ ಚಿಲ್ಲರೆ ರೂಪಾಯಿಗಳ ಎಸ್ಟಿಮೇಟ್ ತಯಾರಾಗಿದೆ. ಅದನ್ನು ಚೀಫ್ ಇಂಜನೀಯರು ನೋಡುತ್ತಿದ್ದಾರೆ. ಅದನ್ನು ಸರ್ಕಾರದವರು ಮಾಡಬೇಕೆಂಬ ಅಭಿಪ್ರಾಯವನ್ನು ಇಟ್ಟುಕೊಂಡಿದ್ದಾರೆ.

Sri ABDUL KUDDUS ANWAR.—Has it not come to the notice of the Government that more than 50 acres of sugarcane crop has been spoiled on account of these channels not being desilted ? Therefore, will the hon. Minister take up this work as early as possible ? The water which was coming from the main Bhadra channel has now been stopped completely.

Sri H. N. NANJE GOWDA.—Water is not stopped from the Bhadra channel. It will be continued for some time more. Any way, the rabi crops were not contemplated. Because seepage water was given to this crop. I will, however, examine the suggestion made by the hon. member.

Officials Working in the same section of secretariat for more than 5 years

420. Sri D. HALAGE GOWDA (Pandavapura).—

Will the Chief Minister be pleased to state :—

(*a*) the number and names of officials and officers in the Secretariat service who have been working in the Department and in the same Section of she Secretariat for more than 5 years ;

(*b*) the special reasons for keeping them in the same place without transferring them for such a long period ?

Sri H. M. CHANNABASAPPA (Minister for Public Works and Electricity [On behalf of Sri D. DEVARAJ URS (Chief Minister)].—

(*a*) 315 persons *vide* Statements placed on the Table of the House.*

(*b*) The continuance of Officers and officials in the same Department is due to administrative reasons, and in the interest of Government's works.

---

*Copy placed in the Mysore Legislature Library *vide No.* 24 dated 29-3-1973.